ರಾಜ್ಯ ಸರ್ಕಾರದ ಅನುಮತಿಯನ್ನು ಅವರು ಪಡೆದಿರುವುದಿಲ್ಲ. ಕಬ್ಬು ಸರಬರಾಜು ಮತ್ತು ರೈತರ ಬಾಕಿ ಪಾವತಿಯ ವಿಷಯದಲ್ಲಿ ನಡೆದ ಸಭೆಯ ಸಂದರ್ಭದಲ್ಲಿ ಈ ವಿಷಯ ಪ್ರಸ್ತಾಪಿಸಲ್ಪಟ್ಟಿದ್ದು ಈಗ ಕಾರ್ಖಾನೆಯ ಮಾಲೀಕತ್ವವು ಅರುಣ್ ಶುಗರ್ಸ್‌ರವರಿಗೆ ಹಸ್ತಾಂತರವಾಗಿದ್ದು ಕಾನೂನು ರೀತ್ಯ ಇನ್ನೂ ಬದಲಾವಣೆ ಆಗಬೇಕಾಗಿದೆ ಎಂದು ಸಭೆಗೆ ಹಾಜರಿದ್ದ ಪ್ರತಿನಿಧಿಗಳು ತಿಳಿಸಿದ್ದಾರೆ.

ಇ) ಒಪ್ಪಂದದ ಪ್ರಕಾರ ಈ ಕಾರ್ಖಾನೆಯು ರೈತರಿಗೆ ಕೊಡಬೇಕಾದ ಒಟ್ಟು ಮೊತ್ತ ರೂ.2136.05 ಲಕ್ಷ ಈ ಪೈಕಿ ಕಾರ್ಖಾನೆಯು ರೂ.918.00 ಲಕ್ಷ ಮಾತ್ರ ತೀರುವಳಿ ಮಾಡಿದ್ದು ಸುಮಾರು 1218.05 ಲಕ್ಷ ಬಾಕಿ ಉಳಿಸಿಕೊಂಡಿದೆ.

ಕುಂದಾಪುರ ತಾಲ್ಲೂಕು ಕೋಡೇರಿಯಲ್ಲಿ ಕಿರು ಬಂದರನ್ನು ನಿರ್ಮಿಸುವುದು.

1511 (1834)

ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು): ಮಾನ್ಯ ಮೀನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಕೋಡೇರಿಯಲ್ಲಿ ಕಿರು ಬಂದರನ್ನು ನಿರ್ಮಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?

ಆ) ಹಾಗಿದ್ದಲ್ಲಿ ಇದನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ಕೋಡೇರಿಯಲ್ಲಿ ಕಿರು ಮೀನುಗಾರಿಕಾ ಬಂದರನ್ನು ನಿರ್ಮಿಸುವುದು ಆರ್ಥಿಕವಾಗಿ ಸಮಂಜಸವಲ್ಲದ್ದರಿಂದ ಬಂದರಿನ ನಿರ್ಮಾಣದ ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ನಬಾರ್ಡ್ ಮೂಲಕ ಗಂಗನಾಡು-ಕಾರ್ನಿ ರಸ್ತೆ ನಿರ್ಮಿಸಿ ಸಾಗರವನ್ನು ಸಂಪರ್ಕಿಸುವುದು.

1512 (1835)

ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೈಂದೂರಿನಿಂದ ಸಾಗರಕ್ಕೆ ಅತೀ ಹತ್ತಿರವಾಗುವ ಬೈಂದೂರು-ಗಂಗನಾಡು-ಕಾರ್ನಿ ರಸ್ತೆ ನಿರ್ಮಾಣಕ್ಕೆ ಈಗಾಗಲೇ ನಬಾರ್ಡ್‌ಗೆ ಅಂದಾಜು ಪಟ್ಟಿ ಸಲ್ಲಿಸಲಾಗಿದೆಯೆ?

2. ಈ ವಿಚಾರದಲ್ಲಿ ವೈಡ್ ಲೈಪ್‌ನಿಂದ ಅನುಮೋದನೆ ದೊರಕಿದೆಯೆ?

3. ಈ ರಸ್ತೆ ನಿರ್ಮಾಣಕ್ಕೆ ಸರ್ಕಾರ ಮಂಜೂರಾತಿ ನೀಡಲಾಗಿದೆಯೆ?

4. ಹಾಗಿದ್ದಲ್ಲಿ ಈ ಕೆಲಸವನ್ನು ಕಾರ್ಯರೂಪಕ್ಕೆ ತರಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಬೈಂದೂರು ಗಂಗನಾಡು ಕಾರ್ನಿ ರಸ್ತೆ ಹಾಲಿ ಗಾಡಿ ದಾರಿಯಾಗಿದ್ದು, ಈ ರಸ್ತೆ ನಿರ್ಮಾಣಕ್ಕೆ ಅಂದಾಜನ್ನು ನಬಾರ್ಡ್‌ಗೆ 97-98ರಲ್ಲಿ ಸಲ್ಲಿಸಲಾಗಿದ್ದು, ಇದು ಅರಣ್ಯ ವ್ಯಾಪ್ತಿಯಲ್ಲಿ ಬರುವುದರಿಂದ ನಬಾರ್ಡ್ ಈ ಕಾಮಗಾರಿಗೆ ಅನುಮೋದನೆ ನೀಡಿರುವುದಿಲ್ಲ. ಆದಕಾರಣ ಕಾಮಗಾರಿಯನ್ನು ಕೈಬಿಡಲಾಗಿದೆ.

2. ಸದರಿ ರಸ್ತೆಯು ಲೋಕೋಪಯೋಗಿ ಇಲಾಖೆಯ ರಸ್ತೆಯಲ್ಲವಾದ್ದರಿಂದ ಪ್ರಸ್ತಾವನೆಯನ್ನು ಇಲಾಖೆ ಸಲ್ಲಿಸಿರುವುದಿಲ್ಲ.

3. ಈ ಕಾಮಗಾರಿಯನ್ನು ನಬಾರ್ಡ್ ಯೋಜನೆಯಡಿ ಕೈಬಿಡಲಾಗಿದೆ.

4. ಉದ್ಭವಿಸುವುದಿಲ್ಲ.

ಅರಣ್ಯ ಪ್ರದೇಶದ ಒತ್ತುವರಿ.

1513 (2305)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರಿನ ತತ್ಕೊಳ ಮಾಸಲು ಅರಣ್ಯದಲ್ಲಿ ಜಮಾನು